6. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ತಿದ್ದುಪಡಿ ಮಾಡುವ ಬಗ್ಗೆ.

ವಿಷಯ: ಕಾವೇರಿ ಐತೀರ್ಪಿನ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡಿರುವಂತಹ ಸಂದರ್ಭದಲ್ಲಿ ಸರ್ಕಾರದ ಕೆಲವು ಕಾರ್ಯಕ್ರಮಗಳ ಬಗ್ಗೆ ಸದನದಲ್ಲಿ ಮಂಡನೆ ಮಾಡಿದ್ದಾರೆ. ಇವತ್ತು ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಸೌಕರ್ಯಗಳಾದ ನವೀಕರಣ, ಆಧುನೀಕರಣ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಅನುಮೋದನೆ ಕೊಡತಕ್ಕಂಥ ವಿಚಾರದಲ್ಲಿ "ಕಾವೇರಿ ಐತೀರ್ಪಿಗೆ ಅನುಸಾರವಾಗಿ' ಎಂದು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರು ಮಂಡನೆ ಮಾಡಿದ್ದಾರೆ. "ಕಾವೇರಿ ಐತೀರ್ಪಿಗೆ ಅನುಸಾರವಾಗಿ" ಎಂದು ಏನಿದೆ ಆ ವಿಷಯದಲ್ಲಿ ನಾವು ಇವತ್ತು ಸದನದಲ್ಲಿ ಒಪ್ಪಿಗೆ ಕೊಟ್ಟರೆ ಇದು ನಮ್ಮ ರಾಜ್ಯಕ್ಕೆ, ಆ ಪ್ರದೇಶದ ರೈತರಿಗೆ ಮತ್ತು ಬೆಂಗಳೂರು ನಗರದ ನಾಗರಿಕರಿಗೂ ಕುಡಿಯುವ ನೀರಿನ ಸೌಲಭ್ಯಕ್ಕೆ ಮಾರಕವಾಗತಕ್ಕಂತ ನಿರ್ಣಯವಾಗುತ್ತದೆ. ಆ ದೃಷ್ಟಿಯಿಂದ ನಿಯಮಾವಳಿ 21ರ ಅಡಿಯಲ್ಲಿ ಕಾವೇರಿ ಐತೀರ್ಪಿನ ವಿಷಯದಲ್ಲಿ ಎರಡು ವಾಕ್ಯಗಳೇನಿವೆ ಅದನ್ನು ತಿದ್ದುಪಡಿಮಾಡಿ ತೆಗೆದುಹಾಕಬೇಕೆಂದು ಮನವಿಯನ್ನು ಮಾಡುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ಮನವಿಯನ್ನು ನಾನೇನು ಸಲ್ಲಿಸಿದ್ದೇನೆ, ಅದನ್ನು ಸರ್ಕಾರ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಡಿ. ಇದು ಅತ್ಯಂತ ಸೂಕ್ಷ್ಮವಾದಂತಹ ವಿಚಾರ. ಇವತ್ತು "ಕಾವೇರಿ ಐತೀರ್ಪಿಗೆ ಅನುಸಾರವಾಗಿ" ಎನ್ನುವುದನ್ನು ಸದನದಲ್ಲಿ ರಾಜ್ಯಪಾಲರ ಮುಖಾಂತರ ಏನು ಹೇಳಿಸಿದ್ದೀರಿ, ಹೀಗಿದ್ದಾಗ ನೀವು ಸರ್ಕಾರದ ಮುಖಾಂತರ ಕೋರ್ಟ್‌ನಲ್ಲಿ SLP ಏಕೆ ಹಾಕಿದ್ದೀರಿ? ಇವತ್ತು ನೀವು ಕಾವೇರಿ ಐತೀರ್ಪಿಗೆ ತಲೆಬಾಗುವುದಾದರೆ ಅದರಿಂದ ಮುಂದೆ ಏನಾಗಬಹುದು? ಪಕ್ಕದ ತಮಿಳುನಾಡಿನ ರಾಜ್ಯದಲ್ಲಿರುವ ಮುಖ್ಯಮಂತ್ರಿ ಮತ್ತು ಅಧಿಕಾರಿಗಳ ವಿಚಾರದಲ್ಲಿ ಯಾವರೀತಿ ನಡವಳಿಕೆಯನ್ನು ಕಾಣುತ್ತಿದ್ದೇವೆ. ಇವತ್ತು ನಾವೇ ಅವರಿಗೆ ಬಲವಾದ ಅಸ್ತ್ರವನ್ನು ಕೊಟ್ಟ ಹಾಗೆ ಆಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಆಗಸ್ಟ್ 7ನೇ ತಾರೀಖಿನಂದು ಪುನಃ ನಾವು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವಂತಹ SLP ಅರ್ಜಿಗಳ ವಿಚಾರಣೆ ಏನಿದೆ, ಕಾವೇರಿ ಐತೀರ್ಪಿಗೆ

ತಲೇಬಾಗುತ್ತೇವೆಂದು ಸದನದಲ್ಲಿಯೇ ಒಪ್ಪಿಗೆ ಕೊಟ್ಟುಕೊಂಡಿದ್ದಾರೆ. ಇದೇ ವಿಷಯವನ್ನು ತೆಗೆದುಕೊಂಡು ಸುಪ್ರೀಂ ಕೋರ್ಟ್ ಮುಂದೆ SLP ಅವಶ್ಯಕತೆ ಏನಿದೆ ಎಂದು ಹೇಳಿದರೆ ನಮ್ಮ ಪರಿಸ್ಥಿತಿಗಳು ಏನಾಗಬಹುದು? ಆ ದೃಷ್ಟಿಯಿಂದ ನಾನು ತಮ್ಮ ಮುಖಾಂತರ ಮಾನ್ಯ ರಾಜ್ಯಪಾಲರ ನಂದನಾ ನಿರ್ಣಯವನ್ನು ಮಂಡನೆ ಮಾಡಬೇಕಾದರೆ ಕಾವೇರಿ ನೀರಿನ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರವನ್ನು ಕೈಬಿಡಬೇಕು ಎಂದು ಸರ್ಕಾರದ ಗಮನ ಸೆಳೆದು ಸರ್ಕಾರದ ಉತ್ತರವನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕಾವೇರಿ ವಿಷಯದಲ್ಲಿ ನಾವ್ಯಾರೂ ರಾಜಕಾರಣ ಮಾಡುವುದಿಲ್ಲ. ಖಂಡಿತ ನಾವೂ ನೀವೂ ಒಟ್ಟಾಗಿ ಸೇರಿ. . .

ಅಧ್ಯಕ್ಷರು :- ಅವರು ಆ ವಿಷಯವನ್ನು ಮಂಡಿಸಿದ್ದಾರೆ, ನಾನು ಆ ವಿಷಯವನ್ನು ಮಂಡಿಸಲಾಗಿದೆ ಎಂದು ಘೋಷಣೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ನಿಮಿಷ ಅದೇ ವಿಷಯದ ಬಗ್ಗೆ ಮಾತನಾಡುತ್ತೇನೆ. ಇಲ್ಲಿ ಪ್ರಶ್ನೆ ಏನೆಂದರೆ ಇದು ಅಚಾತುರ್ಯದಿಂದ ಆಗಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಏನಿದೆ ಎಂದರೆ ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನ ಪ್ರದೇಶದ ಬಾಕಿಯಿರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆ ಕೋರಲಾಗುವುದೆಂದು ನೀವು ಹೇಳಿದ್ದೀರಿ. ನೀವು ಒಂದು ಸಾರಿ ಕಾವೇರಿ ಐತೀರ್ಪಿಗೆ ಒಪ್ಪಿಕೊಂಡು ಬಿಟ್ಟರೆ, ಕಾವೇರಿ dispute ನಲ್ಲಿ SLP, civil appeals supreme court ನಲ್ಲಿ ಏನು pending ಇದೆ, ಆ appeal ಮೇಲೆ ದುಷ್ಪರಿಣಾಮವಾಗುತ್ತದೆ. ಇದರಿಂದ ನೀವು ನಿಮ್ಮ ಹಕ್ಕನ್ನು ಕಳೆದುಕೊಳ್ಳುತ್ತೀರಿ. ಆ appeal ಮೇಲೆ ದುಷ್ಪರಿಣಾಮವಾಗುತ್ತದೆ, ಮತ್ತೆ ನೀವು ನಿಮ್ಮ ಹಕ್ಕನ್ನು ಕಳೆದುಕೊಳ್ಳುತ್ತೀರಿ. ನೀವು ಈ ರೀತಿಯ ಶಬ್ದಗಳನ್ನು ಉಪಯೋಗಿಸುವುದರಿಂದ ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಎಲ್ಲಾ ಅಸ್ತ್ರಗಳನ್ನು ಕೊಟ್ಟ ಹಾಗೆ ಆಗುತ್ತದೆ. ತಾವು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುವುದಕ್ಕೆ ಏನೂ ಉಳಿದಿರುವುದಿಲ್ಲ. SLP ಗೆ ಏನೂ ಬೆಲೆ ಇರುವುದಿಲ್ಲ. ಅದಕ್ಕೆ ನಾನು ತಮ್ಮಲ್ಲಿ request ಮಾಡಿಕೊಳ್ಳುವುದೇನೆಂದರೆ, ಈ ಸಾಲವನ್ನು ಬಿಟ್ಟು ಬಿಡಿ. ನಾವು amendment ಅನ್ನು move ಮಾಡುತ್ತೇವೆ, ನಾವು ಚರ್ಚೆ ಮಾಡೋಣ. ಆ ಭಾಗದಲ್ಲಿ ಕುಳಿತಿರುವವರು ವಿರೋಧವಾಗಿದ್ದೀರಿ ಅಥವಾ ತಮಿಳುನಾಡಿಗೆ

help ಮಾಡುವುದಕ್ಕೆ ಹೊರಟಿದ್ದೀರೆಂಬ ಮಾತನ್ನು ನಾನು ಹೇಳುತ್ತಿಲ್ಲ. ಇಲ್ಲಿ ಶಬ್ದವನ್ನು ಉಪಯೋಗಿಸಿರುವಂಥದ್ದೇ ಅಚಾತುರ್ಯವಾಗಿರುವಂಥದ್ದು. ತಾವು ಇದನ್ನು withdraw ಮಾಡಿ, ಅದಕ್ಕೆ ನಾವು amendment ಅನ್ನು move ಮಾಡುತ್ತೇವೆ. ನೀವೇ ಆಡಳಿತ ಪಕ್ಷದಿಂದ move ಮಾಡಿ, ಆಮೇಲೆ ಚರ್ಚೆಯನ್ನು ಮಾಡಿ, ಇಲ್ಲವೆಂದರೆ ನಾವು ಕಾವೇರಿ ಪ್ರದೇಶದ ಜನತೆಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅವರಿಗೆ ನಾವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಒಂದು ರೀತಿಯಲ್ಲಿ ತಮಿಳುನಾಡಿಗೆ surrender ಆದ ಹಾಗೆ ಆಗುತ್ತದೆ. ಈ ಅಚಾತುರ್ಯವನ್ನು ತಪ್ಪಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ತಾವೇ amendment ಅನ್ನು move ಮಾಡಿ, ಬೇಕಾದರೆ legal experts, Advocate General ಅವರನ್ನು consult ಮಾಡಿ ನಂತರ ಒಂದು ತೀರ್ಮಾನಕ್ಕೆ ಬಂದು ಇದನ್ನು withdraw ಮಾಡಿಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರೆ, ನೀವೇ ನಿಮ್ಮ ಕಡೆಯಿಂದ amendment ಅನ್ನು move ಮಾಡಿ, ಇಲ್ಲದಿದ್ದರೆ ತಾವು ತಲೆ ತಗ್ಗಿಸಬೇಕಾಗುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಇದನ್ನು ಸರ್ಕಾರ ಒಪ್ಪಿದರೆ ಆಯಿತು ಅಷ್ಟೆ. ಮಾನ್ಯ ಮುಖ್ಯ ಮಂತ್ರಿಯವರಿಗೂ ಅದರ ಬಗ್ಗೆ ಅನುಭವವಿದೆ, ಅವರು ಎದ್ದು ನಿಂತು ಒಪ್ಪಿದ್ದೇವೆಂದು ಹೇಳಿದರೆ ಆಯಿತು.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ದಯಮಾಡಿ ಸರ್ಕಾರಕ್ಕೂ.

. . . . .

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಜಯಚಂದ್ರರವರೆ, ಒಂದು ನಿಮಿಷ, ಪ್ರತಿಪಕ್ಷದ ನಾಯಕರು ಏನು ವಿಚಯವನ್ನು mention ಮಾಡಿದರು, ಆ ರೀತಿ ಒಂದು commitment Governor's adress ನಲ್ಲಿ ಇದೆ. ಇದರಿಂದ ನಾವು courtನಲ್ಲಿ ಬಹಳಷ್ಟು ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ನಾವು ಇಂಥಾದ್ದೇ ಬಹಳಷ್ಟು ಸಮಸ್ಯೆಗಳನ್ನು ಎದುರಿಸಿದ್ದೇವೆ. ತಾವು ಇಲ್ಲಿ final order ಪ್ರಕಾರ ನಡೆದುಕೊಳ್ಳುತ್ತೇವೆ ಅದರ ಪ್ರಕಾರವೇ ವಿಸ್ತರಣೆ ಮಾಡುವಂಥದ್ದು, ಇನ್ನೂ ಹೆಚ್ಚು ನೀರಾವರಿ ಮಾಡುವಂಥದ್ದು, ಆವಾರ್ಡ್ ಪ್ರಕಾರ ಆಗುವಂಥದ್ದು ಏನು ಇದೆ ಅದನ್ನು ನಾವು challenge

ಮಾಡಿದ್ದೇವೆ. ಈ issueಗಳು ಸುಪ್ರೀಂ ಕೋರ್ಟ್‌ನಲ್ಲಿ ಎಲ್ಲಾ pending ಇವೆ. ಇಂಥ ಸಮಯದಲ್ಲಿ ತಾವು ಅದನ್ನು ಒಪ್ಪಿಕೊಂಡು ಅದರ ಪ್ರಕಾರ ನಡೆಯುತ್ತೇವೆನ್ನುವಂಥದ್ದು ಏನು ಇದೆ ಇದರಿಂದ ನಾವು ಬಹಳಷ್ಟು ಕಾನೂನು ಸಮಸ್ಯೆಗಳಿಗೆ ಈಡಾಗುತ್ತೇವೆ. ಹಾಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಏನು mention ಮಾಡಿದ್ದಾರೆ. ಅದರಲ್ಲಿ ಬಹಳಷ್ಟು ಅರ್ಥವಿದೆ. ದಯವಿಟ್ಟು Governor speech prepare ಮಾಡುವಾಗ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಅಧಿಕಾರಿಗಳು ಬರೆದುಕೊಡುತ್ತಾರೆ, ಅದರ ಪ್ರಕಾರ ಹೇಳುವಂಥದ್ದಲ್ಲ. ಮಾನ್ಯ ಕಾನೂನು ಸಚಿವರು, ಮಾನ್ಯ ಮುಖ್ಯಮಂತ್ರಿಯವರು ಬಹಳ ಅನುಭವವುಳ್ಳವರಾಗಿದ್ದೀರಿ. ತಾವು ಇಂಥ ವಿಚಾರವನ್ನು ಬಹಳಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್.ಡಿ,ರೇವಣ್ಣ : ಮಾನ್ಯ ಅಧ್ಯಕ್ಷರೆ, ದಯಮಾಡಿ ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಮೊದಲು ಕೇಳಿ. ಅನಂತರ ಹೇಳಲಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ರೇವಣ್ಣನವರೆ, ಒಂದು ವಿಚಾರ, ತಮಗೆ ಸಹಾಯ ಮಾಡಲು

(ಗೊಂದಲ)

ಶ್ರೀ ಹೆಚ್.ಡಿ,ರೇವಣ್ಣ : ಮಾನ್ಯ ಅಧ್ಯಕ್ಷರೆ, ಎಲ್ಲಾ ಮೆಂಬರ್ಸ್ ಹೇಳಿದ ಮೇಲೆ ಅವರು ಹೇಳಲಿ. ನನಗೆ ಸಹಾಯ ಬೇಡ.

ಅಧ್ಯಕ್ಷರು : ಒಂದು ನಿಮಿಷ ಅವರು ಏನೋ ಹೇಳುತ್ತಿದ್ದಾರೆ ಹೇಳಲಿ.

ಶ್ರೀ ಹೆಚ್.ಡಿ,ರೇವಣ್ಣ : ಮಾನ್ಯ ಅಧ್ಯಕ್ಷರೆ, ಎಲ್ಲಾ ಸದಸ್ಯರು ಹೇಳಿದ ಮೇಲೆ ಅವರು ಹೇಳಲಿ, ದಯಮಾಡಿ ಅವರಿಗೆ ತಾಳ್ಮೆಯಿಂದ ಇರುವುದಕ್ಕೆ ಹೇಳಿ. ತಾವು ನಮಗೆ ಸಹಾಯ ಮಾಡುವುದು ಬೇಡ. ತಾವು ದಯಮಾಡಿ ಕುಳಿತುಕೊಳ್ಳಿ, ಆಮೇಲೆ ಉತ್ತರ ಹೇಳಿ. ಮಾನ್ಯ ಜಯಚಂದ್ರರವರು ದಯಮಾಡಿ ತಾಳ್ಮೆಯಿಂದ ಇದ್ದು, ವಿರೋಧ ಪಕ್ಷದವರಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಆಮೇಲೆ ಮಾತನಾಡಲಿ.

ಅಧ್ಯಕ್ಷರು:– ಇದು ಪ್ರಮುಖವಾದಂಥ ವಿಷಯವಾಗಿದ್ದು, ದಯವಿಟ್ಟು ಸಮಾಧಾನದಿಂದ ಒಂದು ನಿಮಿಷ ಕೇಳೋಣ.

ಶ್ರೀ ಟಿ.ಬಿ.ಜಯಚಂದ್ರ:– ನಾನು ಒಂದು ವಿಚಾರವನ್ನು ಹೇಳಿ ಬಿಡುತ್ತೇನೆ, ಆಮೇಲೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :– ಒಂದು ನಿಮಿಷ, ತಾಳ್ಮೆಯಿಂದ ಇರಿ, Law Minister ಏನು ಹೇಳುತ್ತಾರೋ ಹೇಳಲ್ಲಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು yield ಆಗುವುದಕ್ಕೆ ಹೇಳಿ. ಅವರು ವಿಷಯವನ್ನು ತಿಳಿದುಕೊಂಡು ಆಮೇಲೆ ಎಲ್ಲಾ ವಿಷಯಗಳಿಗೂ ಉತ್ತರವನ್ನು ಕೊಡಲಿ.

ಶ್ರೀ ಟಿ.ಬಿ.ಜಯಚಂದ್ರ : ತಾವು ದಯಮಾಡಿ. . . .

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಜಯಚಂದ್ರರವರೆ, ತಾವು ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಒಂದು ವಿಚಾರ. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯ. . . .

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರಿಗೆ ಸ್ವಲ್ಪ ತಾಳ್ಮೆಯಿಂದ ಇರುವುದಕ್ಕೆ ಹೇಳಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :– I am correcting the records

ಶ್ರೀ ಆರ್. ಅಶೋಕ್ : ನಾವು ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡಲ್ಲವೇ? Law Minister ರವರೆ ಕುಳಿತುಕೊಳ್ಳಿ. ನಾವು ಹೇಳುವುದಕ್ಕೆ ಮುಂಚೆಯೇ ತಾವು ಉತ್ತರ ಕೊಟ್ಟರೆ ಹೇಗೆ? ಅರ್ಥ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಈಗ ಸಭೆಯ ಗಮನಕ್ಕೆ ತರುವುದೇನೆಂದರೆ, ಸಭೆಯಲ್ಲಿ ಸಭಾನಾಯಕರು ಇದ್ದಾರೆ, Law Minister ಇದ್ದಾರೆ. ಇವರ ಗಮನಕ್ಕೆ ತರುವುದೇನೆಂದರೆ, ಇದು ಸಚಿವ ಸಂಪುಟದಲ್ಲಿ ಅನುಮೋದನೆಯಾಗಿರುವಂಥದ್ದು. ಇವತ್ತು ಮಾನ್ಯ ರಾಜ್ಯಪಾಲರು ವಂದನಾ ನಿರ್ಣಯವನ್ನು ಮಂಡಿಸುವಾಗ ಅದು ಸಚಿವ ಸಂಪುಟದಲ್ಲಿ ನಿರ್ಣಯವಾಗಿ ನಂತರ ಇದನ್ನು ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದೀರಿ. ನಾನು ಕೇಳುವುದೇನೆಂದರೆ, ಇವತ್ತು ಕೇಂದ್ರದಲ್ಲಿ ಕರ್ನಾಟಕ ಸರ್ಕಾರದ ಎರಡು Writ Petitions pending ಇವೆಯೆಂಬುದನ್ನು ಮಾನ್ಯ ಸಿದ್ದರಾಮಯ್ಯ–ನವರು ಇದ್ದಾಗಲೂ ಮಾಹಿತಿಯನ್ನು ಕೊಟ್ಟಿದ್ದರು. ಹಿಂದೆ ಮಾನ್ಯ ಜಗದೀಶ್

ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲೂ ಮಾನ್ಯ ಬಸವರಾಜ ಬೊಮ್ಮಾಯಿಯವರು ಮಾಹಿತಿಯನ್ನು ಕೊಟ್ಟಿದ್ದರು. 2007ರಲ್ಲಿ ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇದ್ದಂಥ ಕಾಲದಿಂದಲೂ ಎರಡು Writ Petitions ಇನ್ನೂ pending ಇವೆ. ಕಾವೇರಿ ಐತೀರ್ಪು ಬಂದಮೇಲೆ ನಮ್ಮ Advocate General ಹಾಕಿರುವಂಥ ಎರಡು Writ Petitions pending ಇರುವಾಗ ಸಚಿವ ಸಂಪುಟ ಅನುಮೋದನೆ ಕೊಡಬೇಕಾದರೆ ನಾವು ತಮಿಳುನಾಡಿನಲ್ಲಿ ಇವತ್ತು ಕರ್ನಾಟಕ ರಾಜ್ಯವನ್ನು ಅಡವಿಟ್ಟ ಹಾಗೆ ಆಗಿ ಹೋಯಿತು.

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ, ನಾನು ಹೇಳುವುದನ್ನು ಕೇಳಿ. ವಿರೋಧ ಪಕ್ಷದ ನಾಯಕರು.. ..

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು ಹೇಳುವವರೆಗೂ ಇರಿ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ತಾವು ಮಾತನಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ತಂದಿರುವಂಥ ವಿಚಾರದಲ್ಲಿ ಒಂದು ವಿಚಾರದಲ್ಲಿ ಒಂದು ವಿಚಾರ ಅಡಕವಾಗಿದೆ. ನಾನು ಅದನ್ನು ಹೇಳುವುದಕ್ಕೋಸ್ಕರ ನಿಂತಿದ್ದೆನೆಯೇ ವಿನಃ ಬೇರೆನೂ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಹೇಳಿದ ಮೇಲೆ ತಾವು ಹೇಳಿ.

ಶ್ರೀ ಟಿ.ಬಿ.ಜಯಚಂದ್ರ:– I am correcting the records ತಾವು ತಮಿಳುನಾಡಿಗೆ ಸಹಾಯ ಮಾಡುತ್ತೀರೆಂದರೆ..

ಅಧ್ಯಕ್ಷರು:– ಈಗ ಅದೆಲ್ಲಾ ಏಕೆ?

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗ ವಂದನಾ ನಿರ್ಣಯ ಪ್ರಸ್ತಾವವನ್ನು ಮಂಡನೆ ಮಾಡಿದ್ದಾರೆ, ಅದು ಅನುಮೋದನೆಯಾಗಿದೆ.

ಅಧ್ಯಕ್ಷರು:– ಹೌದು.

ಶ್ರೀ ಟಿ.ಬಿ.ಜಯಚಂದ್ರ:– ಆ ಸಂದರ್ಭದಲ್ಲಿ ಮಾನ್ಯ ವಿರೋಧದಪಕ್ಷದ ನಾಯಕರು ತಿದ್ದುಪಡಿ ರೂಪದಲ್ಲಿಟ್ಟಿದ್ದಾರೆ. ಈ ತಿದ್ದುಪಡಿ ಸ್ವರೂಪ ಹೇಗಿದೆಯೆನ್ನುವ ವಿಚಾರವಾಗಿ ತಮ್ಮ ಗಮನಕ್ಕೆ ತರುವಂಥದ್ದು ಏನೆಂದರೆ, ಚರ್ಚೆಯ ವ್ಯಾಪ್ತಿ, ಅಂಥ ಭಾಷಣದ ಸಂಬಧದಲ್ಲಿ ವಂದನಾರ್ಪಣೆಯ ಸೂಚಕವಾದ ನಿರ್ಣಯವನ್ನು ಒಬ್ಬ ಸದಸ್ಯರು ಮಂಡಿಸಿ, ಇನ್ನೊಬ್ಬ ಸದಸ್ಯರು ಅದನ್ನು ಅನುಮೋದಿಸಿದ ತರುವಾಯ ಆ ಭಾಷಣದಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಅಂಥ ದಿನಗಳಂದು ಅಂಥ ಯಾವುದೇ ಸಂದರ್ಭದಲ್ಲಿ

ಚರ್ಚಿಸುವಂಥ ಸ್ವಾತಂತ್ರ್ಯವನ್ನು ಸದನವೂ ಹೊಂದಿದೆ. ಇಲ್ಲಿ ಚರ್ಚೆ ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ. ಅಧ್ಯಕ್ಷರು ಸೂಕ್ತವೆಂದು ಪರಿಗಣಿಸಿ– ಬಹುದಾದ ರೀತಿಯಲ್ಲಿ ಅಂತಹ ವಂದನಾರ್ಪಣ ಸೂಚಕವಾದ ನಿರ್ಣಯದ ಸಂಬಂಧದಲ್ಲಿ ತಿದ್ದುಪಡಿಗಳನ್ನು ಸೂಚಿಸಬಹುದು. ಇದು ತಿದ್ದುಪಡಿ ತಂದಿರುವಂಥದ್ದು, ಸಭೆಯ ವಸ್ತುವಾಗಿದೆ, ಇದನ್ನು ಚರ್ಚೆ ಮಾಡೋಣ. ಆದರೆ ಇದರ ಬಗ್ಗೆ ಇನ್ನೂ ಚರ್ಚೆಯನ್ನೇ ಪ್ರಾರಂಭ ಮಾಡಿಲ್ಲ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರ ಭಾಷಣ ಮಂಡನೆಯಾದ ಮೇಲೆ, ನಾವು ಅವರ ಸುದೀರ್ಘವಾದ ಭಾಷಣವನ್ನು ಕೇಳಬೇಕು. ನಾವು ಅವರ ಅನುಭವದ ಮಾತುಗಳನ್ನೂ ಕೂಡ ಕೇಳಬೇಕೆಂದು ಇದ್ದೇವೆ. ಈಗಾಗಲೇ ಮಾನ್ಯ ಯಡಿಯೂರಪ್ಪನವರು ಮಾತನಾಡಿದ ರೀತಿಯನ್ನು ನಾವು ಒಪ್ಪುತ್ತೇವೆ. ಕಾವೇರಿ ವಿಚಾರದಲ್ಲಿ ಯಾರೂ ವಿರುದ್ಧವಿಲ್ಲ. ಇವತ್ತು ಕುಡಿಯುವ ನೀರಿನ ತೋಂದರೆಯಾಗಿದೆ ಎನ್ನುವಂಥದ್ದು ಎಲ್ಲರಿಗೂ ಅರಿವಾಗಿದೆ. ಈ ತಿದ್ದುಪಡಿಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರು ಚರ್ಚೆಗೆ ಉತ್ತರ ಕೊಡುವಂಥ ಸಂದರ್ಭದಲ್ಲಿ, ಪ್ರಸ್ತಾಪ ಮಾಡೋಣ. ಈಗ ಮಂಡನೆಯಾಗಿದೆ, ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾವೇರಿ ಇವೊತ್ತು ನಮ್ಮ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಇದರ ಬಗ್ಗೆ ನಿರ್ಣಯ ಮಾಡಬೇಕು. ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು:– ಆಯಿತು, ಹೇಳಿ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಷಯವಾಗಿ ಚರ್ಚೆಯಾಗಬೇಕು, ಕಾರ್ಯಕಲಾಪಗಳು ನಡೆಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ನನ್ನ ಒಂದೇ ಒಂದು ವಿನಂತಿ ಏನೆಂದರೆ, ಈ ಕಡೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವಂಥದ್ದು. ಈ ಸರ್ಕಾರ ಹೊಸದಾಗಿ ಬಂತು, ತರಾತುರಿಯಲ್ಲಿ ಸಮಯದ ಅಭಾವವಿತು. ಇವರು ಮಾನ್ಯ ರಾಜ್ಯಪಾಲರಿಂದ ಭಾಷಣ ಮಾಡಿಸಬೇಕಾಯಿತು. ಇದಕ್ಕೆ ಮಂತ್ರಿಮಂಡಲದಿಂದ ಒಪ್ಪಿಗೆಯನ್ನು ತೆಗೆದುಕೊಂಡಿದ್ದೀರಿ. ತಾವು ಒಪ್ಪಿಗೆಯನ್ನು ತೆಗೆದುಕೊಂಡ ಮೇಲೆ ಮಾನ್ಯ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಏನು ಮಾಡುತ್ತಿದ್ದೇನೆಂದರೆ, ಪ್ರತಿ ಪಕ್ಷದ ನಾಯಕರು ಸಮಯಕ್ಕೆ ಸರಿಯಾಗಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ,

ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು ಎನ್ನುವ ಶಬ್ದ ಏನು ಇದೆ. ಎನ್ನುವ ಶಬ್ದ ಏನು ಇದೆ ಇದನ್ನು ತಾವು ತಿದ್ದುಪಡಿ ಮಾಡಿ, ನೀವೇ ಇದನ್ನು ಮಂಡನೆ ಮಾಡಿ ಆ ಗೌರವವನ್ನು ನೀವೇ ತೆಗೆದುಕೊಳ್ಳಿ. ನಾವು ಇದಕ್ಕೆ ಸರ್ವಾನುಮತ-ದಿಂದ ಮನ್ನಣೆ ಕೊಡಲು ಸಿದ್ಧರಿದ್ದೇವೆ. ಈಗಾಗಲೇ ಕಾವೇರಿ disputeನಲ್ಲಿ SLPs, civil appeals Supreme Court ನಲ್ಲಿ pending ಇದೆ. ಇದರಿಂದ ಈ appeal ಮೇಲೆ ದುಷ್ಪರಿಣಾಮವಾಗುತ್ತದೆ. ಒಂದು ಕಡೆ Monitoring Committee ಬಗ್ಗೆ ವಿರೋಧ ಮಾಡುತ್ತೇವೆ. ಇನ್ನೊಂದು ಕಡೆ ಇದನ್ನು ಒಪ್ಪಿಕೊಳ್ಳುತ್ತೇವೆ. ಇದನ್ನು ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ, by mistake ಇದು ಆಗಿರಬಹುದೆಂದು ನಾವು ಅಂದುಕೊಂಡಿದ್ದೇವೆ. ತಾವು ಬೇಕಾದರೆ ಸಭೆಯನ್ನು ಐದು ನಿಮಿಷ adjourn ಮಾಡಿ, Adocate General ಅವರನ್ನು consult ಮಾಡಿ. ನೀರಾವರಿ experts ಅನ್ನು ಸ್ಪೀಕರ್‌ರವರ ಕೊಠಡಿಯಲ್ಲಿ ಕರೆದು ಮಾತನಾಡಿ. ಈ ವಿಷಯವಾಗಿ ಸರ್ವಾನುಮತದಿಂದ amendment ಅನ್ನು move ಮಾಡಿ, ನಂತರ ಚರ್ಚೆಗೆ ತೆಗೆದುಕೊಳ್ಳಿ, ಇದು ರಾಜ್ಯದಲ್ಲಿ, ದೇಶದಲ್ಲಿ ಚರ್ಚೆಯಾಗಬಾರದು, ಇದರಿಂದ ತಮಿಳುನಾಡಿಗೆ ಅನುಕೂಲವಾಗಬಾರದೆಂಬ ಒಂದೇ ಒಂದು ವಿನಂತಿ ನಮ್ಮದಿದೆ. ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಭಾಷಣ ಮಾಡಲಿ ನೀವು ಭಾಷಣ ಮಾಡಿ, ಕೊನೆಗೆ ಅದನ್ನು ತರುವುದೆಂದು ಹೇಳುವುದಲ್ಲ. ನಾವು ಈಗಲೇ ತಮ್ಮ ಗಮನಕ್ಕೆ ತಂದಿದ್ದೇವೆ. ತಮಗೆ ಸರಿ ಅನಿಸಿದರೆ ಹತ್ತು ನಿಮಿಷ ಸಭೆಯನ್ನು adjourn ಮಾಡಿ.

ಅಧ್ಯಕ್ಷರು:- ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಾವು 10 ನಿಮಿಷ ಸಭೆಯನ್ನು adjourn ಮಾಡಿ. ಈ ಬಗ್ಗೆ ಮಾಹಿತಿಗಳನ್ನು ತರಿಸಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು:- ಬೇಡ, ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಮೇಲೆ ಏನು ಹೇಳಿದ್ದಾರೆ, ನಾವು ಭಾಷಣದಲ್ಲಿ ಬಂದಿರುವ ವಿಷಯಗಳ ಬಗ್ಗೆ ಚರ್ಚೆ

ಮಾಡಬಹುದು, ತಿದ್ದುಪಡಿ ಮಾಡಬಹುದೆಂಬ ವಿಚಾರವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಬಂದಿರುವುದೇನೆಂದರೆ, ಮೂಲ ಭಾಷಣಕ್ಕೆ ತಿದ್ದುಪಡಿ ತರುವಂಥ ಪ್ರಸಂಗ ಬಂದಿದೆ. ಇವತ್ತು ಕಾವೇರಿ ಜೀವ ನದಿ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಇಲ್ಲಿ ನಾವು ಮಾಡುವಂಥ ಅಕ್ಷರಗಳ ತಪ್ಪುಗಳು ಆ ರೈತರಿಗೆ ಶಾಶ್ವತವಾಗಿ ದುಷ್ಪರಿಣಾಮ ಬೀರುವಂತಾಗಬಾರದು.

(ಗೊಂದಲ)

ಅಧ್ಯಕ್ಷರು: ಒಂದು ಮಾತನ್ನು ಹೇಳುತ್ತೇನೆ ಕೇಳಿ. ದಯವಿಟ್ಟು ಮೆರಿಟ್ ಮೇಲೆ ಹೋಗಬೇಡಿ, ಟೆಕ್ನಿಕಲ್‌ಆಗಿ ಏನಾದರೂ ಹೇಳುವುದಿದ್ದರೆ ಹೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, Cauvery Monitoring Board ಬೇಡ ಎಂದು ನಾವು ಈಗಾಗಲೇ ವಾದವನ್ನು ಮಾಡಿದ್ದೇವೆ. ತೀರ್ಪಿನ ಅಡಿಯಲ್ಲಿ ತಾತ್ಕಾಲಿಕವಾದಂಥ ಈ ಬೋರ್ಡ್ ಯಾವ ರೀತಿ ನಡೆಯಬೇಕು, ಯಾವ ರೀತಿ ಮಾರ್ಗದರ್ಶನ ವಿರಬೇಕು ಎನ್ನುವುದೇನಿದೆ, ಅದನ್ನು ಇವರು ರಾಜ್ಯಪಾಲರ ಭಾಷಣದಲ್ಲೇನು ಒಪ್ಪಿಕೊಂಡಿದ್ದಾರೆ, ಅದನ್ನೇ ಯಥಾವತ್ತಾಗಿ Xerox copy ಮಾಡಿ ಅವರು ಈಗಾಗಲೇ, ಟೆಂಪೊರರಿಯಾಗಿ ಸೆಟ್ ಆಪ್ ಆಗಿರುವ ಬೋರ್ಡ್‌ನಲ್ಲೇ ಅನುಷ್ಠಾನ ಮಾಡಲು ಹೊರಟಿದ್ದಾರೆ. ಅದಕ್ಕೆ ನಮ್ಮವರು ಆಕ್ಷೇಪ ಮಾಡಿದ್ದಾರೆ. ಇಂಥ ಒಂದು ಸೂಕ್ಷ್ಮ ಕಾಲದಲ್ಲಿ ಈ ತೀರ್ಪನ್ನು ಒಪ್ಪಿಕೊಂಡು ಬಿಟ್ಟರೆ, ತೀರ್ಪಿನ ಭಾಗವಾಗಿರುವಂಥ ಮಾರ್ಗಸೂಚಿಗಳನ್ನು ಒಪ್ಪಿಕೊಂಡು ಆ ಬೋರ್ಡ್ ಅಸ್ತಿತ್ವಕ್ಕೆ ಬಂದರೆ, ನಾಳೆಯಿಂದಲೇ ನಮ್ಮ ಡ್ಯಾಂಗಳ ನಿಯಂತ್ರಣ ಕೇಂದ್ರ ಸರ್ಕಾರದ ಆ ಮಂಡಳಿಗೆ ಹೋಗುತ್ತದೆ. ಇದು ಗಂಭೀರವಾದಂಥ ವಿಚಾರ. ತಾಂತ್ರಿಕವಾಗಿ ಹೇಳಿದೆವು, ಅವರು ಒಪ್ಪಿಕೊಂಡರು ಎನ್ನುವ ಪ್ರಶ್ನೆ ಇಲ್ಲಿ ಇಲ್ಲ. It is nine other than His Excellency the Governor who has spoken this on the floor of the House during the Joint

Session.So, it is intent and will of the Government. ಅದನ್ನು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸಿದ ಮೇಲೆ, a it is much more a serious document than any Affidavit in the Supreme Court. ಕಾವೇರಿ ನೀರಿನ ವಿಚಾರ ಬಂದಾಗ ನಾವು ತೀರ್ಪನ್ನು ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ, ಅದರಲ್ಲಿರುವಂಥ ನೀರಿನ ಪ್ರಮಾಣದ ಬಗ್ಗೆ

ಒಪ್ಪಿಕೊಂಡಿಲ್ಲ, ನೀರಿನ ಹಂಚಿಕೆ ಬಗ್ಗೆ ಒಪ್ಪಿಕೊಂಡಿಲ್ಲ. ನಮಗೆ ಹೆಚ್ಚಿಗೆ ನೀರು ಬೇಕು, ಹೆಚ್ಚಿಗೆ ನೀರಾವರಿ ಪ್ರದೇಶ ಬೇಕು ಎಂದು ಹೇಳಿದ್ದೇವೆ. ಹೀಗೆ ಹಲವಾರು ಆಯಾಮಗಳು ಈ ತೀರ್ಪಿನ ಅಡಿಯಲ್ಲಿ ಇವೆ. ಅದಕ್ಕಾಗಿ ನಾವು civil writ petition ಗಳನ್ನು ಬೇರೆಬೇರೆ ರೂಪದಲ್ಲಿ ಹಾಕಿದ್ದೇವೆ. ಆದ್ದರಿಂದ ನಾವು ಈ ವಿಚಾರದಲ್ಲಿ ಪ್ರತಿಷ್ಠೆ ಮಾಡುವುದು ಬೇಡ.

ಅಧ್ಯಕ್ಷರು: ದಯವಿಟ್ಟು ಕೇಳಿ ಚರ್ಚೆಯ ಕಾಲದಲ್ಲಿ ಅವುಗಳನ್ನೆಲ್ಲ ಹೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಜಯಚಂದ್ರರರೇ, ಇದರಲ್ಲಿ ಪ್ರತಿಷ್ಠೆ ಮಾಡುವುದು ಬೇಡ. ನಾವು ಹೇಳುವುದೇನೆಂದರೆ, ನಮ್ಮ ಕಾವೇರಿ ಜಲಾನಯದ ಪ್ರದೇಶದ ರೈತರ ಹಿತರಕ್ಷಣೆ ಮಡುವಂಥ, ರಾಜ್ಯದ ಹಿತ್ತಾಸಕ್ತಿಯನ್ನು ರಕ್ಷಣೆ ಮಾಡುವಂಥ ತಿದ್ದುಪಡಿಯನ್ನು ತನ್ನಿ. ಇದನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುವುದು ಬೇಡ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:- ವಿರೋಧ ಪಕ್ಷದ ನಾಯಕರು ಏನು ತಿದ್ದುಪಡಿಯನ್ನು ತಂದಿದ್ದಾರೆ, ಆ ತಿದ್ದುಪಡಿಯನ್ನು ತಂದಿರುವುದಕ್ಕೆ ಮೂಲ ಕಾರಣವೇನು ಎನ್ನುವುದನ್ನು ವಿರೋಧ ಪಕ್ಷದ ನಾಯಕರು ಹೇಳಲಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದರ ಮೇಲೆ ಚರ್ಚೆಗೆ ಅವಕಾಶವನ್ನೇ ಕೊಡಬೇಡಿ, ದಯಮಾಡಿ ಒಂದು ನಿರ್ಣಯವನ್ನು ಮಂಡಿಸಿ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಒಪ್ಪಿಕೊಂಡಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ.

ಅಧ್ಯಕ್ಷರು: ಚರ್ಚೆಯ ಕಾಲದಲ್ಲಿ ಎಲ್ಲ ವಿಚಾರಗಳನ್ನು ಹೇಳಿ.

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವೂ ಸಹ ಕಾವೇರಿ ಅಚ್ಚುಕಟ್ಟು ಪ್ರದೇಶದಿಂದ ಬಂದಿದ್ದೇವೆ. ಈ ವಿಚಾರದಲ್ಲಿ ತಾವು ದಯಮಾಡಿ ತಾಳ್ಮೆ ಕೆಡಿಸಿಕೊಳ್ಳಬೇಡಿ.

ಅಧ್ಯಕ್ಷರು: ನಾನು ತಾಳ್ಮೆ ಕಳೆದುಕೊಳ್ಳುವುದಿಲ್ಲ. ದಯವಿಟ್ಟು ಹಾಗೆ ತಿಳಿದುಕೊಳ್ಳಬೇಡಿ. ಚರ್ಚೆ ವಿಧಾನಬದ್ಧವಾಗಿ ಆಗಲಿ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಈ ಸರ್ಕಾರಕ್ಕೆ ನಮ್ಮ ಪ್ರಾರ್ಥನೆ ಏನೆಂದರೆ ಇದು ಚರ್ಚೆಯಾಗಿ ನಂತರ ತೆಗೆಯಲು ಹೋದರೆ ಕೇಂದ್ರ ಸರ್ಕಾರಕ್ಕಾಗಲೀ, ಸುಪ್ರೀಂ ಕೋರ್ಟ್‌ಗಾಗಲೀ ಖಂಡಿತವಾಗಿ wrong message ಹೋಗುತ್ತದೆ. ಜಂಟಿ ಸದನದಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸಿ, ನಂತರ ಇದನ್ನು ನಾವು ಸುದೀರ್ಘವಾಗಿ ಚರ್ಚೆ ಮಾಡಿ, ಆನಂತರ ಇದಕ್ಕೆ ತಿದ್ದುಪಡಿ ತಂದರೆ ಖಂಡಿತವಾಗಿ ಇದಕ್ಕೆ ಬೆಲೆ ಸಿಗುವುದಿಲ್ಲ. ದಯವಿಟ್ಟು ನಾವು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇವೆ, ಒಂದು ಸಾಲಿನ ತಿದ್ದುಪಡಿಯನ್ನು ಮಂಡಿಸಿ ಕಾವೇರಿ ಅಚ್ಚುಕಟ್ಟು ಪ್ರದೇಶಕ್ಕೆ ಎಂದರೆ ಬೆಂಗಳೂರಿನ ಜನರಿಗೆ death notice ಇದ್ದಹಾಗಿದೆ. ದಯಮಾಡಿ ಈ ವಿಚಾರದಲ್ಲಿ ಹೆಚ್ಚಿನ ಚರ್ಚೆಗೆ ಅವಕಾಶ ಕೊಡುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳಿಗೆ ಹೆಚ್ಚಿನ ಅನುಭವ ಇದೆ, ಕಾನೂನು ಸಚಿವರಿಗೆ ಅನುಭವ ಇದೆ, ಈ ರೀತಿ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವುದು ದುರಂತ ಎಂದು ಅಂದುಕೊಳ್ಳುತ್ತೇವೆ. ಈ ವಿಚಾರದಲ್ಲಿ ಹೆಚ್ಚಿನ ಚರ್ಚೆಗೆ ಅವಕಾಶ ಕೊಡುವುದು ಬೇಡ, ದಯವಿಟ್ಟು ಈ ವಿಚಾರದಲ್ಲಿ ತಿದ್ದುಪಡಿಗೆ ಒಪ್ಪಿಗೆ ಕೊಟ್ಟು ಮುಂದಕ್ಕೆ ಹೋಗಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ:– ಚರ್ಚೆ ಮಾಡಿದ ಮೇಲೆ ನಾವು ಉತ್ತರ ಕೊಡುವಾಗ ಹೇಳುತ್ತೇವೆ. ಕಾವೇರಿ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಕಳಕಳಿ ಇದ್ದಿದ್ದರೆ ನೀವು ಇದನ್ನು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡುವಾಗ ಯೋಚನೆ ಮಾಡಬೇಕಾಗಿತ್ತು ಸ್ವಾಮಿ?

ಶ್ರೀ ಟಿ.ಬಿ.ಜಯಚಂದ್ರ:– ನಾವು ನಂತರ ಉತ್ತರ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೇ, ಇನ್ನೂ ಚರ್ಚೆಯೇ ಪ್ರಾರಂಭವಾಗಿಲ್ಲ. ಈ ಮಧ್ಯದಲ್ಲಿ ನೀವು ಒಂದು ತಿದ್ದುಪಡಿಯನ್ನು ಸೂಚಿಸಿದ್ದೀರಿ. ಚರ್ಚೆಯಾದ ಮೇಲೆ ಆ ತಿದ್ದುಪಡಿಯನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವಿರುತ್ತದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ, ಕಾವೇರಿ ನೀರಿನ ವಿಚಾರದಲ್ಲಿ ಏನು ಸೂಕ್ಷ್ಮತೆ ಇದೆ, ಅದನ್ನು ಈ ಸರ್ಕಾರದವರು ಎಷ್ಟರ ಮಟ್ಟಿಗೆ

ಅರಿತುಕೊಂಡು ಎಷ್ಟು ಗಾಂಭೀರ್ಯದಿಂದ ರಾಜ್ಯಪಾಲರ ಭಾಷಣವನ್ನು ಸಿದ್ಧ ಮಾಡಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಈಗಾಗಲೇ ರೇವಣ್ಣನವರು ಹೇಳಿದಂತೆ, ಸಚಿವ ಸಂಪುಟ ಸಭೆಯಲ್ಲಿ ಇದಕ್ಕೆ ಒಪ್ಪಿಗೆಯನ್ನು ಕೊಟ್ಟು, ರಾಜ್ಯಪಾಲರಿಂದ ಸದನದಲ್ಲಿ ಮಂಡನೆಯನ್ನು ಮಾಡಿಸಿದ್ದೀರಿ. ಹೀಗೆ ಸದನದಲ್ಲಿ ಮಂಡನೆ ಮಾಡಿದ ಮೇಲೆ ನೀವು ಯಾವ ರೀತಿಯಲ್ಲಿ ಈ ರಾಜ್ಯದ ಜನತೆಯ ಮತ್ತು ನೀರಿನ ರಕ್ಷಣೆಯನ್ನು ಮಾಡುತ್ತೀರಿ? ಇದರಲ್ಲಿ ವೈಯಕ್ತಿಕವಾದಂಥ ಪ್ರತಿಷ್ಠೆಯ ಪ್ರಶ್ನೆಯಿಲ್ಲ. ನೀವು ತಪ್ಪು ಮಾಡಿದ್ದರೆ ಅದನ್ನು ಸರಿಪಡಿಸಿಕೊಳ್ಳಿ. ಇಲ್ಲಿ ನಾನು ಹಲವಾರು ವಿಚಾರಗಳನ್ನು ಚರ್ಚೆ ಮಾಡಲು ದಾಖಲೆಗಳ ಸಮೇತ ಬಂದಿದ್ದೇನೆ. ಇಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದುದನ್ನು ಮಾಧ್ಯಮಗಳು ಬರೆದರೆ ಅದು ನಾಳೆ ತಮಿಳುನಾಡಿಗೆ ಹೋಗುತ್ತದೆ. ತಮಿಳುನಾಡಿನವರಿಗೆ ಇಷ್ಟೇ ಸಾಕು. ಇಲ್ಲಿಯವರೆಗೆ ನಮಗೆ ಏನು ಅನ್ಯಾಯವಾಗಿದೆ. ಇಲ್ಲಿಯವರೆಗೆ ನಾವು ಏನು ಅನುಭವಿಸಿದ್ದೇವೆ, ಅದು ಇನ್ನೂ ದೊಡ್ಡ ಮಟ್ಟದ ಅನ್ಯಾಯವಾಗಬೇಕು ಎನ್ನುವುದು ಸರ್ಕಾರದ ಗಮನದಲ್ಲಿದೆಯೇ? ಪಕ್ಕದ ರಾಜ್ಯವಾದ ತಮಿಳುನಾಡಿನ ಮುಖ್ಯಮಂತ್ರಿಗಳು ಒಂದು ಭಾಷಣದಲ್ಲಿ ಹೀಗೆ ಹೇಳಿದ್ದಾರೆ, " reflecting yet again her ambition for a larger role in national politics, AIADMK Supremo and Chief Minister Jayalalitha asked Wednesday her party leaders to work for securing all 40 Loksabha Seats including Pondicherry."– ಅವರು ಯಾವ ಉದ್ದೇಶದಿಂದ ಅಲ್ಲಿ ರಾಜಕಾರಣವನ್ನು ನಡೆಸುತ್ತಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇಲ್ಲಿ ನಮ್ಮ ಕೆಲವು ತಪ್ಪುಗಳಿಂದ ಹಲವಾರು ಸಮಸ್ಯೆಗಳು ಆಗುತ್ತಿವೆ. ಮೊನ್ನೆ ನಡೆದಂಥ ಸಭೆಯಲ್ಲಿ, ನಾವು ಯಾವುದಕ್ಕೂ ಒಪ್ಪಿಗೆ ಕೊಟ್ಟಿಲ್ಲ, ಸಮಯ ಕೇಳಿ ಬಂದಿದ್ದೇವೆ ಎಂದು ನಮ್ಮ ಮುಖ್ಯ ಕಾರ್ಯದರ್ಶಿಗಳು ಹೇಳಿದ್ದಾರೆ. ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿಗಳು ಕರೆದಂಥ ಸಭೆಯಲ್ಲಿ, ಉಸ್ತುವಾರಿ ಸಮಿತಿಯನ್ನು ರಚನೆ ಮಾಡಲು ಏನು ತೀರ್ಮಾನ ಮಾಡಿದ್ದಾರೆ, ಅದಕ್ಕೆ ನಾವು ಒಪ್ಪಿಗೆ ಕೊಟ್ಟಿಲ್ಲ ಎಂದು ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಪತ್ರವನ್ನು ಬರೆಯುತ್ತಾರೆ. ಇಂಥ ಸಂದರ್ಭದಲ್ಲಿ ನೀವು ಸದನದಲ್ಲಿ ಈ ರೀತಿ ನಿರ್ಣಯ ಮಾಡುವುದಾದರೆ, ರಾಜ್ಯಪಾಲರ ಭಾಷಣದಲ್ಲಿ ಕಾವೇರಿ ನೀರಿನ ವಿಷಯವನ್ನು ತರುವುದಾದರೆ, ಇವತ್ತು ನಾನು ನಿಮ್ಮನ್ನು ಕೇಳಲಿಕ್ಕೆ ಬಯಸುತ್ತೇನೆ, "ಕಾವೇರಿ ಐತೀರ್ಪಿನ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ

ಅನುಮೋದನೆಯನ್ನು ಕೋರಲಾಗುವುದು." ಎಂದು ಭಾಷಣದಲ್ಲಿ ಹೇಳಿದ್ದೀರಿ. ಬಸವರಾಜ ಬೊಮ್ಮಾಯಿಯವರು ನೀರಾವರಿ ಸಚಿವರಾಗಿ ಕೆಲಸ ಮಾಡಿದ್ದಾರೆ, ಈಗಾಗಲೇ ಆಧುನೀಕರಣದ ಮತ್ತು ನವೀಕರಣದ ಕಾಮಗಾರಿಗಳು ನಡೆಯುತ್ತಿವೆ, ಇದನ್ನು ನಾವು ಹೊಸದಾಗಿ ಪ್ರಚಾರ ಮಾಡಿಕೊಳ್ಳಬೇಕಿಲ್ಲ. ಇದಕ್ಕೆ ನಾವು ಈಗ ಯಾರ ಅಪ್ಪಣೆಯನ್ನೂ ಪಡೆಯಬೇಕಾಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಯಾವ ಕಾರಣಕ್ಕೋಸ್ಕರ ನೀವು ಈ ವಿಚಾರವನ್ನು

ರಾಜ್ಯಪಾಲರ ಭಾಷಣದಲ್ಲಿ ಸೇರ್ಪಡೆ ಮಾಡಿಕೊಂಡಿದ್ದೀರಿ?: ಮುಂದಿನ ದಿನಗಳಲ್ಲಿ ಯುಪಿಎ–3 ಸರ್ಕಾರವನ್ನು ತರಲಿಕ್ಕಾಗಿ ಇವತ್ತು ಇದನ್ನು ಅಳವಡಿಸಿಕೊಳ್ಳಲು ಹೊರಟಿರುವಿರೇನು? ಹೀಗೆ ಹೇಳಿ ಇವರು ಯಾರನ್ನು ಮೆಚ್ಚಿಸಲು ಹೊರಟಿದ್ದಾರೆ ಎನ್ನುವುದು ಇಲ್ಲಿರುವ ಪ್ರಶ್ನೆ? ಕೇಂದ್ರ ಜಲಸಂಪನ್ಮೂಲ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿರುವ ರಾಮಸ್ವಾಮಿ ಐಯ್ಯರ್ ಎನ್ನುವವರು ಒಂದು interview ಕೊಟ್ಟಿದ್ದಾರೆ. ಇವತ್ತು ನಮಗೆ ಇರುವಂಥ ಕೆಲವು ಅವಕಾಶಗಳನ್ನು ನೀವೇ seize ಮಾಡಿಕೊಳ್ಳಲು ಹೊರಟಿದ್ದೀರಿ. ರಾಮಸ್ವಾಮಿ ಐಯ್ಯರ್‌ರವರು ಹೀಗೆ ಹೇಳುತ್ತಾರೆ," The S.L.Ps. are still to be heard and we cannot predict the outcome as per the clarificatory petitions to the Tribunal. It is clear that there is no part to their consideration and the issue of supplementary orders."

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಿದ್ದುಪಡಿ ತರುವುದಕ್ಕೆ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ನೋಟಿಸಿನ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿರುವಿರಾ?

ಅಧ್ಯಕ್ಷರು : ಇನ್ನೂ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಕೊಟ್ಟಿಲ್ಲ, ಆದರೂ ಅವರು ಎಲ್ಲವನ್ನೂ ವಿವರವಾಗಿ ಹೇಳಲು ಪ್ರಾರಂಭ ಮಾಡಿದ್ದಾರೆ.

ಅವರು ರಾಜ್ಯಪಾಲರ ಭಾಷಣದಲ್ಲಿರತಕ್ಕಂಥ ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ ಅದನ್ನು ಕೈಬಿಡಬೇಕೆಂದು ಹೇಳಿದ್ದಾರೆ. ಇನ್ನೂ ಚರ್ಚೆ ಪ್ರಾರಂಭವಾಗಿಲ್ಲ. ವಂದನಾ ನಿರ್ಣಯವನ್ನು move ಮಾಡಿ ಚರ್ಚೆ ಪ್ರಾರಂಭವಾದ ಮೇಲೆ ಅವರೂ ಕೂಡ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಅವರೂ ಚರ್ಚೆ ಪ್ರಾರಂಭ ಮಾಡುತ್ತಾರೆ. ಅವರು ಮಾತನಾಡುವಾಗ ಏನು ಹೇಳಬೇಕೋ ಹೇಳಲಿ. ನಾವು ಉತ್ತರ ಕೊಡುವಾಗ ಅವರಿಗೆ

ಸಮಾಧಾನವಾಗುವ ರೀತಿಯಲ್ಲಿ ಕೊಡುತ್ತೇವೆ. ಈ ಬಗ್ಗೆ ಇನ್ನೂ ಒಂದು ಪ್ರತ್ಯೇಕವಾದ ಮತ್ತು ದೀರ್ಘವಾದ ಚರ್ಚೆಗೆ ಅವಕಾಶ ಕೊಡಬಾರದೆನ್ನುವುದು ನನ್ನ ಮನವಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಾವು ಹೇಳಬೇಕು. ಅವರು ಚರ್ಚೆ ಮಾಡುವಾಗ ಏನೆಲ್ಲಾ ಹೇಳಬೇಕೋ ಅದನ್ನೆಲ್ಲ ಹೇಳಲ್ಲಿ.

ಶ್ರೀ ಎನ್. ಚಲುವರಾಯಸ್ವಾಮಿ: ಚರ್ಚೆಗೆ ಸಮರ್ಪಕವಾಗಿ ಉತ್ತರವನ್ನು ಕೊಡುತ್ತೀರಾ? ಅದನ್ನು ಹೇಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನು ಚರ್ಚೆಗೆ ಉತ್ತರ ಕೊಡುವಾಗ ನಿಮಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ತಿದ್ದುಪಡಿ ಬಗ್ಗೆ ಉತ್ತರ ಕೊಡುತ್ತೀರಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ತಿದ್ದುಪಡಿ ಬಗ್ಗೆಯೇ ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಮಗೆ ಸಮಾಧಾನ ಮಾಡುವುದು ಬೇಕಾಗಿರುವುದಲ್ಲ. ರಾಜ್ಯದ ಜನತೆಗೆ ಸಮಾಧಾನವಾಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ಸದನದ ಮೂಲಕ ಇಡೀ ರಾಜ್ಯದ ಜನತೆಗೆ ಮತ್ತು ಈ ಸದನದ ಸದಸ್ಯರಿಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಇದು ಅತ್ಯಂತ ಗಂಭೀರವಾದ ವಿಚಾರ. ಸನ್ಮಾನ್ಯ ಮುಖ್ಯಮಂತ್ರಿಯವರು ಎಲ್ಲರೂ ಭಾಷಣ ಮಾಡಿದ ಮೇಲೆ ಕೊನೆಯಲ್ಲಿ ಉತ್ತರ ಕೊಡುವಾಗ ಹೇಳುತ್ತೇವೆಂದು ಹೇಳುತ್ತಾರೆ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿದೆಯೆಂದಾದರೆ ಕೂಡಲೆ ಇದಕ್ಕೆ ಉತ್ತರ ಕೊಡುತ್ತಾರೆ. ಅದು ಬಿಟ್ಟು ಎರಡು ದಿವಸದ ನಂತರ ತಮ್ಮ ಭಾಷಣದಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದರೆ, ಎಷ್ಟರಮಟ್ಟಿಗೆ ಇದನ್ನು ಗಂಭೀರವಾಗಿ ತೆಗೆದುಕೊಂಡಿದ್ದೀರಿ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ, ಅದರಲ್ಲಿ ಏನೂ ಪ್ರತಿಷ್ಠೆ

ಮಾಡಿಕೊಳ್ಳುವುದು ಬೇಡ. ಆಧುನೀಕರಣ ಈಗಾಗಲೇ ನಡೆಯುತ್ತಿದೆ, ಅದನ್ನು ಮುಂದುವರೆಸಿ, ಈಗ ಇರುವಂಥದ್ದಕ್ಕೆ ತಾವು ದಯವಿಟ್ಟು ಉತ್ತರ ಕೊಟ್ಟುಬಿಡಿ, ಆಗ ನಾವು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಉತ್ತರ ಕೊಟ್ಟರೆ ಚರ್ಚೆಯೇ ಮುಗಿದುಹೋಗುತ್ತದೆ.

(ಗೊಂದಲ)

ಅಧ್ಯಕ್ಷರು: ಅವರು ರಾಜ್ಯಪಾಲರ ಭಾಷಣವನ್ನು ಚರ್ಚೆಗೆ ಮಂಡಿಸಿದ್ದಾರೆ. ತಾವು ಚರ್ಚೆಯ ಕಾಲದಲ್ಲಿ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿ. ನೀವು ಏನು ತಿದ್ದುಪಡಿ ಮಾಡಿದ್ದೀರಿ, ಅದನ್ನು ಅದರಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಂಪೂರ್ಣ ಅವಕಾಶವಿದೆ. ಮಾನ್ಯ ಮುಖ್ಯಮಂತ್ರಿಯವರು ನಿಮಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಸರ್ಕಾರ ಬಹಳ ಹಗುರವಾಗಿ ತೆಗೆದುಕೊಂಡಿದೆ ಎನ್ನುವ ಅರ್ಥ ಬರುತ್ತದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, point of order

(ಗೊಂದಲ)

ಅಧ್ಯಕ್ಷರು: ರೇವಣ್ಣ, ಅಶೋಕ್‌ರವರೆ, ಕಾನೂನು ಸಚಿವರು point of order ಪ್ರಸ್ತಾಪಿಸಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ. ನನ್ನ ಕಡೆಯಿಂದ point of order ಇದೆ. ಈಗ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಮಂಡನೆ ಆಗಿದೆ. ಚರ್ಚೆ ಮಾಡುವಂಥ ಪ್ರಾರಂಭದಲ್ಲಿ ಗೌರವಾನ್ವಿತ ವಿರೋಧಪಕ್ಷದ ನಾಯಕರು ಮಾತನಾಡಬಹುದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನಾನು ಹೇಳುವುದನ್ನು ದಯಮಾಡಿ ಕೇಳಿ.

(ಗೊಂದಲ)

ಶ್ರೀ ಆರ್.ಅಶೋಕ್: ಬಹಳ sensitive ವಿಚಾರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇದು ಬಹಳ ಗಂಭೀರವಾದ ವಿಚಾರ.

(ಗೊಂದಲ)

ಅಧ್ಯಕ್ಷರು: point of order ಹೇಳಿದ್ದಾರೆ. ನೀವು ಪುನಃ ಅದನ್ನೇ ಹೇಳುತ್ತಿದ್ದೀರಲ್ಲಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ನೀವು ಮಾತನಾಡಿ, ನಾವು ಉತ್ತರ ಕೊಡುವಾಗ ಮಾತನಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಇದು ಕೇವಲ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಪ್ರಶ್ನೆ ಅಲ್ಲ. ಆ Cauvery issue ಬಗ್ಗೆ award ಏನಾಗಿದೆ, ಆ award ಅನ್ನು ನಾವು ಒಪ್ಪಿಕೊಂಡಿದ್ದೇವೆಯೋ ಇಲ್ಲವೋ ಎನ್ನುವ ಪ್ರಶ್ನೆ ಇದೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು point of order ಹೇಳಿದ್ದಾರೆ. ನೀವೆಲ್ಲ ಕುಳಿತುಕೊಳ್ಳಿ, ಆಮೇಲೆ ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ. ನಿಯಮ 27ರ ಅಡಿಯಲ್ಲಿ ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ ಎಂದು ನಿರ್ದಿಷ್ಟವಾಗಿ ಇದೆ. ಆ ಕ್ರಮದಲ್ಲಿ ಯಾರೇ ಸದಸ್ಯರು ಭಾಷಣ ಮಾಡುವ ಮೂಲಕ ಅಥವಾ ಕ್ರಿಯಾಲೋಪವೆತ್ತಿ ರಾಜ್ಯಪಾಲರ ಭಾಷಣದ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿ ಮಾಡತಕ್ಕಂಥದ್ದಲ್ಲ. ಹಾಗೆಯೇ ಉತ್ತರ ಕೊಡುವ ವಿಚಾರದಲ್ಲಿ ಸರ್ಕಾರದ ಹಕ್ಕು ಇದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಉತ್ತರ ಕೊಡುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಯವರಿಗೆ ಹಕ್ಕಿದೆ. ಅವರು ಪ್ರಸ್ತಾಪಿಸಿರುವ ವಿಚಾರಗಳಿಗೆ ಉತ್ತರ ಕೊಡುವಂಥದ್ದು ಇದೆ.

(ಗೊಂದಲ)

ಅಧ್ಯಕ್ಷರು: ನೀವು ಹೇಳಿದಂತೆಯೇ ಅವರು ಹೇಳಬೇಕೆ? ಅವರಿಗೆ ಏನು ತಿಳಿಯಿತೋ ಅದನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಆದರೆ ultimately ಚರ್ಚೆ ಆದಮೇಲೆ it will be put to the vote of the House ಆ ಸಂದರ್ಭದಲ್ಲಿ ನಾವು ನಮ್ಮ ಸರ್ಕಾರದ ನಿಲುವು ಏನಿದೆ ಎಂದು ತೀರ್ಮಾನ ಮಾಡುತ್ತೇವೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಚರ್ಚೆ ಪ್ರಾರಂಭವಾಗಲಿ. ಚರ್ಚೆಗೆ ಅವಕಾಶ ಕೊಡಿ. ಚರ್ಚೆ ಮಾಡುವಂಥ ಸಂದರ್ಭದಲ್ಲಿ ಎಲ್ಲವನ್ನೂ ಹೇಳಿಲಿ.

(ಗೊಂದಲ)

ಅಧ್ಯಕ್ಷರು: Please, ಒಂದು ನಿಮಿಷ.

(ಗೊಂದಲ)

ಅಧ್ಯಕ್ಷರು: Law Minister ರವರೆ, ಈಗ ನಿಮ್ಮ point of order – ಇದೆಯಲ್ಲಾ it is not a point of order ಏಕೆ ಎಂದರೆ, ಅವರು ತಿದ್ದುಪಡಿ ಕೊಟ್ಟಿದ್ದಾರೆ. ಆ ತಿದ್ದುಪಡಿ ಕೊಡುವುದಕ್ಕೆ ಅವಕಾಶವಿದೆಯೋ ಇಲ್ಲವೋ ಎನ್ನುವುದರ ಬಗ್ಗೆ ನೀವು legal opinion ಕೊಡಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ರಾಜ್ಯಪಾಲರ ಭಾಷಣದಲ್ಲಿ ನಾವು ಏನು ಹೇಳಿದ್ದೇವೆ, ಅದಕ್ಕೆ ಉತ್ತರ ಕೊಡುತ್ತೇವೆ. ನೀವು ಚರ್ಚೆ ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ: ನಿಯಮ 27ರಲ್ಲಿ ರಾಜ್ಯಪಾಲರು ಭಾಷಣ ಮಾಡುವಾಗ ಅಡ್ಡಿ ಮಾಡತಕ್ಕದ್ದಲ್ಲ ಅಥವಾ ಯಾವುದೇ ಹೇಳತಕ್ಕಂಥದ್ದಲ್ಲ ಎಂದು ಹೇಳಿದೆ.

(ಗೊಂದಲ)

ಅಧ್ಯಕ್ಷರು: ಈಗ ನೀವು ನಿಯಮ 69ರ ಕೆಳಗಡೆ discussion ಮಾಡುತ್ತೀರೋ ಇಲ್ಲವೋ? ಜಗದೀಶ್ ಶೆಟ್ಟರ್‌ರವರೆ, ನಿಯಮ 69ರ ಕೆಳಗಡೆ ಚರ್ಚೆ ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಆರ್.ಅಶೋಕ್: ರಾಜ್ಯಪಾಲರು ಭಾಷಣ ಮಾಡುವ ಮೊದಲು ಇದು ಕ್ಯಾಬಿನೆಟ್‌ನಲ್ಲಿ ಅನುಮೋದನೆಯಾಗಿದೆ. ಅದಕ್ಕೂ ಮೊದಲು ಇವರು ಚರ್ಚೆಮಾಡಬೇಕಾಗಿತ್ತು." ಕಾವೇರಿ ಐತೀರ್ಪಿಗೆ ಅನುಸಾರವಾಗಿ" ಎಂದು ಇದೆ. ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಆದರೆ ನಮ್ಮ ರಾಜ್ಯದ ಸ್ಥಿತಿ ಗತಿ ಏನಾಗಬೇಕು?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುತ್ತಿರುವುದು ತಮಗೆ convince ಆದರೆ, ತಮ್ಮಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಯವರಲ್ಲಿ ಇಷ್ಟೇ ಮನವಿ ಮಾಡುವುದು, ನಾವು ಇಂಥ ಸಂದರ್ಭದಲ್ಲಿ ಇರುವ ಸಂಪ್ರದಾಯವೇನೆಂದರೆ, technical ಆಗಿ ಇದು ಸಾಧುವಲ್ಲ. ಐತೀರ್ಪುದ ಈಗಾಗಲೇ ಬಂದಿದೆ. ನಮಗೆ ಹೆಚ್ಚಿನ ನೀರು ಬೇಕು ಇತ್ಯಾದಿ ಎಲ್ಲದರ ಬಗ್ಗೆ ಈಗಾಗಲೇ SLP ಹಾಕಿಕೊಂಡು ಹೋರಾಟ ಮಾಡುತ್ತಿದ್ದೇವೆ. ಸರ್ಕಾರದ ಕಡೆಯಿಂದ ನೀವು ಐತೀರ್ಪಿಗೆ ಅನುಸಾರವಾಗಿ ಮಾಡುತ್ತೇವೆಂದು ಹೇಳಿದ್ದೀರಿ. ಇದರಿಂದ ಆ ಐತೀರ್ಪನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ. ನಿಮ್ಮ ಕೊಠಡಿಗೆ ನಮ್ಮನ್ನು ಕರೆಯಿರಿ, ನಾವು ನಿಮಗೆ convince ಮಾಡುತ್ತೇವೆ. Advocate General ರವರನ್ನು ಕರೆಯಿರಿ, ಇದು ಬಿಟ್ಟರೆ ನಾವು ಹೊರಗಡೆ ಹೋಗಬೇಕಾಗುತ್ತದೆ. ನಾವು ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ನೀವು ಈ ರೀತಿ ಹಠ ಮಾಡುವುದಾದರೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ದಯಮಾಡಿ ತಮ್ಮ ಕೊಠಡಿಯಲ್ಲಿ ಸಭೆ ಕರೆದು ಐದು ನಿಮಿಷ ಚರ್ಚೆ ಮಾಡಿ. ವಿರೋಧ ಪಕ್ಷದ ನಾಯಕರೆ, ಅವರ ಕೊಠಡಿಗೆ ಹೋಗಿ ಐದು ನಿಮಿಷ ಚರ್ಚೆ ಮಾಡೋಣ. ನಿಮ್ಮನ್ನು convince ಮಾಡುತ್ತೇವೆಂದರೂ ನೀವು ಕೇಳುವುದಿಲ್ಲ. Advocate General ಅವರನ್ನು ಕರೆದು ಅವರ ಜೊತೆಗೆ ಸಮಾಲೋಚನೆ ಮಾಡೋಣ ಎಂದರೂ ನೀವು ಒಪ್ಪುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳೇ Advocate General ರವರನ್ನು ಕರೆಯಿರಿ, ಚರ್ಚೆ ಮಾಡೋಣ, convince ಆದರೆ ನಾವು ಒಪ್ಪುತ್ತೇವೆ, ಇದರಲ್ಲಿ ನಮ್ಮ ವಿರೋಧವಿಲ್ಲ. ಕಾವೇರಿ ನದಿ ನೀರಿನ ವಿವಾದದಲ್ಲಿ ನಾವೆಲ್ಲರೂ ಒಂದೇ. ಈಗ ಐದು ನಿಮಿಷ ಸದನ adjourn ಮಾಡಿ Advocate General ರವರನ್ನು ಕರೆದು ಅಧ್ಯಕ್ಷರ ಕೊಠಡಿಯಲ್ಲಿ ಸಭೆ ಸೇರಿ ಚರ್ಚೆ ಮಾಡೋಣ. ಯಾವ ರೀತಿಯಾಗಿ ಇದನ್ನು ಅನುಸರಿಸಬೇಕೆಂದು ಚರ್ಚೆ ಮಾಡಿ ಆ ನಂತರ ಐದು ನಿಮಿಷಗಳಾದ ಮೇಲೆ ಇಲ್ಲಿ ಸಭೆ ಸೇರೋಣ. ನಾವು ಕೋ-ಅಪರೇಟ್ ಮಾಡುವುದಕ್ಕೆ ರೆಡಿ ಇದ್ದೇವೆ. ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಈಗ ಸದನ adjourn ಮಾಡಿ ತಮ್ಮ ಕೊಠಡಿಯಲ್ಲಿ ಐದು ನಿಮಿಷ ಸಭೆ ಮಾಡಿದರೆ ಒಳ್ಳೆಯದು.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದು ಬಹಳ ಗಂಭೀರವಾದ ವಿಚಾರ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಯಡಿಯೂರಪ್ಪನವರೆ,

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಜಯಚಂದ್ರರವರೆ, ಇದು ರೂಲ್ ಪ್ರಶ್ನೆಯಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ರೂಲ್ ಪ್ರಶ್ನೆಯಲ್ಲ ದಯಮಾಡಿ ಕೇಳಿ.

ಅಧ್ಯಕ್ಷರು: ಎಲ್ಲರೂ ಇಲ್ಲಿ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲದಿದ್ದರೆ ನೀವು ತಮಿಳುನಾಡಿಗೆ ಸರೆಂಡರ್ ಆಗಿದ್ದೀರೆಂದು ಹೇಳಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– No, No ಅದಲ್ಲ

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಹೌದು. ರಾಜ್ಯಪಾಲರ ಭಾಷಣದಲ್ಲಿ ಒಪ್ಪಿಕೊಂಡಿದ್ದೇವೆಂದು ಹೇಳಿದ್ದೀರಲ್ಲ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸರೆಂಡರ್ ಆಗಿಲ್ಲ. ಹೀಗೇ ಮಾಡಬೇಕು ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ಇದು ಸರ್ಕಾರದ ಮೊಂಡುತನ. ಸರ್ಕಾರ ಈ ರೀತಿ ಮೊಂಡುತನ ಮಾಡಬಾರದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸರ್ಕಾರ ಹೀಗೇ ಮಾಡಬೇಕು ಎಂದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾಂತ್ರಿಕ ಸಮಸ್ಯೆಯಲ್ಲ ಈ ರೀತಿ ಸರ್ಕಾರ ಮೊಂಡುತನ ಮಾಡುವಂಥಾದ್ದಲ್ಲ. ದಯವಿಟ್ಟು ಕಾನೂನು ಸಲಹೆ ತೆಗೆದುಕೊಳ್ಳಿ.

ನಾವು ಕೂಡ ದೆಹಲಿಗೆ ಹತ್ತು ಸಲ ಹೋಗಿ ಕಾವೇರಿ ಅಥಾರಿಟಿ ಮೀಟಿಂಗ್‌ಗೆ ಅಟೆಂಡ್ ಆಗಿ ಬಂದಿದ್ದೇವೆ. ಸಾಕಷ್ಟು ಸಲ ಹೋಗಿ ಲೀಗಲ್ ಫ್ರೇಮ್‌ನಲ್ಲಿ ಕೆಲಸ ಮಾಡಿದ್ದೇವೆ. ಇದರ consequence ಏನಾಗುತ್ತದೆ ಎಂಬುದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು, ನೀವು ಪ್ರಸ್ತಾಪ ಮಾಡಿದ್ದೀರಿ, ಅವರು ಉತ್ತರ ಹೇಳುತ್ತಾರೆ. ಶೆಟ್ಟರ್‌ರವರೆ, ದಯಮಾಡಿ ಸ್ವಲ್ಪ ಕೇಳಿ. ಹೇಳಿದ ತಕ್ಷಣ ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಇಲ್ಲಿ ವಿವರವಾಗಿ ಚರ್ಚೆ ಮಾಡಿದರೆ ಅದು ಅವರಿಗೆ ಅನುಕೂಲವಾಗಬಹುದು.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ ಕೊಡುವ ಸಂದರ್ಭದಲ್ಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಇದರ ಬಗ್ಗೆ ಗಂಭೀರವಾದ ಚರ್ಚೆಯಾಗಲಿ. ಚರ್ಚೆಯಾದ ನಂತರ ನಾವು ಉತ್ತರ ಕೊಡುತ್ತೇವೆಂದರೆ ಹೇಗೆ? ಉತ್ತರ ಕೊಡುವಾಗ ಅವರು ಹೇಳಲಿ. ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಸರ್ಕಾರ ತಕ್ಷಣವೇ ನಿರ್ಧಾರ ತೆಗೆದುಕೊಳ್ಳಬೇಕು. ನೀವು ಎಲ್ಲಾ ಚರ್ಚೆ ಮಾಡಿ ನಾಳೆ ನಾವು ಉತ್ತರ ಕೊಡುತ್ತೇವೆ ಎಂದು ಹೇಳುವುದಿಲ್ಲ. ಒಂದು ಕಡೆ ನೀವು ರಾಜ್ಯಪಾಲರ ಭಾಷಣದಲ್ಲಿ ಅವಾರ್ಡ್‌ನ್ನು ಒಪ್ಪುತ್ತೀರಿ. ಅದರ ಪ್ರಕಾರ ನವೀಕರಣ ಮತ್ತೊಂದು ಯೋಜನೆಗಳಿಗೆ ಪರ್ಮಿಷನ್ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಇದರ ಅರ್ಥ ಏನಿದೆ? ಎಲ್ಲವನ್ನೂ ಒಪ್ಪಿಕೊಂಡ ಮೇಲೆ ನಾಳೆ ನೀವು ಆ ರಿಟ್ ಪೆಟಿಷನ್ ಮೇಲೆ ಏನು ಮಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮೊದಲು ಹುಟ್ಟಾ ವಿಚಾರ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಅದರೂ ನಿಮ್ಮ ಸ್ಟ್ಯಾಂಡ್ ಏನಿದೆ ಎಂದು ಹೇಳಬೇಕು ಅಲ್ಲವೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅಧ್ಯಕ್ಷರು ಆದೇಶ ಮಾಡಿರುವಂತೆ ಮೊದಲು ಗುಟ್ಕಾ ವಿಚಾರ ತೆಗೆದುಕೊಳ್ಳಿ. ಮೊದಲು ಇದರ ಬಗ್ಗೆ ಚರ್ಚೆಯಾಗಲಿ, ಈಗ ಅವರು ತಂದಿರುವ ವಿಚಾರಕ್ಕೆ ನಾವು ಉತ್ತರ ಕೊಡುವಾಗ ಹೇಳುತ್ತೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದು ಸುದೀರ್ಘವಾಗಿ ಚರ್ಚೆಯಾಗಬೇಕೆನ್ನುವುದು ಸಭಾನಾಯಕರ, ಕಾನೂನು ಸಚಿವರ ಆಸೆ ಇದ್ದರೆ, ನಾವು ಅದಕ್ಕೆ ತಯಾರಾಗಿದ್ದೇವೆ. ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಚರ್ಚೆ ಮಾಡುವಾಗ ಸದನದಲ್ಲಿ ಇದೆಲ್ಲದರ ಬಗ್ಗೆ ಗಮನ ಸೆಳೆಯುತ್ತೇನೆ. ಇದಾದ ನಂತರವೂ ಅವರೇನು ತೀರ್ಮಾನ ಕೊಡುತ್ತಾರೆಂದು ನೋಡೋಣ. ಅವರಿಗೆ ಚರ್ಚೆಯಾಗಲೇಬೇಕೆನ್ನುವ ಆಸೆ ಇದ್ದಾಗ ನಾನು ಏತಕ್ಕೆ ಬೇಡ, ಇದನ್ನು ತೆಗೆದು ಹಾಕಿ ಎಂದು ಹೇಳಬೇಕು? ಅದೂ ಆಗಲಿ. ಇವತ್ತು ಸಭೆಯ ಕಲಾಪಗಳು ನಡೆಯುವುದಕ್ಕೆ ಅನಾನುಕೂಲಗಳಾಗುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ನಾನು ಸ್ವಾಗತಿಸುತ್ತೇನೆ.

ಅಧ್ಯಕ್ಷರು : ಓ.ಕೆ. ಈಗ ಜಗದೀಶ್ ಶೆಟ್ಟರ್‌ರವರೆ, ತಾವು ಪ್ರಸ್ತಾಪಿಸಿ.

ಶ್ರೀ ಜಗದೀಶ್ ಶೆಟ್ಟರ್ : ಮೊದಲಿಗೆ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪಿಸುತ್ತಾರೆ.

ಅಧ್ಯಕ್ಷರು : ಆಯಿತು, ಹೆಗಡೆಯವರು ತಾವು ಪ್ರಾರಂಭಿಸಿ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ರಾಜ್ಯ ಸರ್ಕಾರ ಗುಟ್ಕಾ ನಿಷೇಧ ಮಾಡಿರುವ ಬಗ್ಗೆ.

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಶಿರಸಿ) :– ಮಾನ್ಯ ಅಧ್ಯಕ್ಷರೆ, ನಾವು ನಿಯಮ 60ರಡಿಯಲ್ಲಿ ಮಂಡಿಸಿರುವ ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಪರಿವರ್ತಿಸಿ ಈ ಒಂದು ಅಡಿಕೆ ಬೆಳೆಗಾರರಿಗೆ ಆಗುವಂಥ ಕಷ್ಟವನ್ನು ಈ ಸದನದಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಇದಕ್ಕಾಗಿ ನಾನು ನಿಮಗೆ